ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಂಡ ಕಾಮಗಾರಿಗಳು

183(1628) ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಸಿಂಧಗಿ ತಾಲ್ಲೂಕಿನಲ್ಲಿ 2001-02ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೆತ್ತಿಕೊಂಡ ಕಾಮಗಾರಿಗಳು ಯಾವುವು; ಅವು ಯಾವ ಹಂತದಲ್ಲಿವೆ; ಅವುಗಳಿಗೆ ನಿಗಧಿಪಡಿಸಿದ ಹಣವೆಷ್ಟು ಹಾಗೂ ಬಿಡುಗಡೆ ಮಾಡಿದ ಹಣವೆಷ್ಟು?

2) ವಿಶೇಷ ಘಟಕ ಯೋಜನೆಯಲ್ಲಿ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಲ್ಲಿಸಿದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ? ಬಂದಿದ್ದರೆ ತೆಗೆದುಕೊಂಡ ಕ್ರಮವೇನು? ಅವುಗಳನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

1) 2001-02ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕಿನಲ್ಲಿ ವಿಶೇಷ ಘಟಕ ಯೋಜನೆ : ಗಿರಿಜನ ಉಪ ಯೋಜನೆಯಡಿ ಸಣ್ಣ ನೀರಾವರಿ ಇಲಾಖಾ ಕಾಮಗಾರಿಗಳಿಗೆ ಅನುದಾನವನ್ನು ನಿಗಧಿಪಡಿಸಿರುವುದಿಲ್ಲ. ಆದುದರಿಂದ ಯಾವುದೇ ಕಾಮಗಾರಿಯನ್ನು ಸಣ್ಣ ನೀರಾವರಿ ಇಲಾಖೆಯಿಂದ ಸಿಂಧಗಿ ತಾಲ್ಲೂಕಿನಲ್ಲಿ ಕೈಗೆತ್ತಿಕೊಂಡಿರುವುದಿಲ್ಲ.

2) ಈ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುವುದಿಲ್ಲ. ಆದರೆ, ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕಿಗೆ ಪರಿಶಿಷ್ಟ ಜಾತಿಯವರ ಜಮೀನಿನಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ವಿಶೇಷ ಘಟಕ ಯೋಜನೆಯಡಿ ತೆಗೆದುಕೊಳ್ಳಲು ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ಇವರಿಗೆ ದಿನಾಂಕ : 9.7.2002 ರಲ್ಲಿ ಪ್ರಸ್ತಾವನೆಯೊಂದು ಬಂದಿದ್ದು, ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ಇವರು ಸದರಿ ಪ್ರಸ್ತಾವನೆಯನ್ನು ಸಿಂಧಗಿ ಕ್ಷೇತ್ರಕ್ಕೆ ನಿಗಧಿಪಡಿಸಿರುವ ಗುರಿಯಡಿಯಲ್ಲಿ ಪರಿಶೀಲಿಸಲು ಪರಿಶಿಷ್ಟ ಜಾತಿ: ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಕಳುಹಿಸಿಕೊಡಲಾಗಿದೆ. ಈ ಬಗ್ಗೆ ಜರೂರು ಪರಿಶೀಲಿಸಲಾಗುವುದು.

ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಿಂದ ನನಗೆ ಅಷ್ಟೊಂದು ಸಮಾಧಾನವಾಗಿಲ್ಲ. ಏಕೆಂದರೆ 2001-02ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿಯಲ್ಲಿ ಸಣ್ಣ ನೀರಾವರಿ ಇಲಾಖಾ ಕಾಮಗಾರಿಗಳಿಗೆ ಅನುದಾನವನ್ನು ನಿಗದಿಪಡಿಸಿರುವುದಿಲ್ಲ. ಆದುದರಿಂದ ಯಾವುದೇ ಕಾಮಗಾರಿಯನ್ನು ಸಣ್ಣ ನೀರಾವರಿ ಇಲಾಖೆಯಿಂದ ಸಿಂಧಗಿ ತಾಲ್ಲೂಕಿನಲ್ಲಿ ಕೈಗೆತ್ತಿಕೊಂಡಿರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಆಯುಕ್ತರಿಂದ ನನಗೆ ಒಂದು ಪತ್ರ ಬಂದಿದೆ, 2002-03ನೇ ಸಾಲಿಗೆ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನಲ್ಲಿ ಕಾಮಗಾರಿಗಳನ್ನು ಅನುಷ್ಟಾನಗೊಳಿಸುವ ಬಗ್ಗೆ ಸರ್ಕಾರದ ಪತ್ರ ಸಂಖ್ಯೆ : ಕಬಿಎಸ್‌ಎಲ್ 2002ರಲ್ಲಿ ಸಮಾಜ ಕಲ್ಯಾಣ ಅಧಿಕಾರಿಗಳು, ಬಿಜಾಪುರ ಇದನ್ನು ಕೊಟ್ಟಿದ್ದಾರೆ. ಸಿಂಧಗಿ ಮತಕ್ಷೇತ್ರ ಅತೀ ಹಿಂದುಳಿದ

ಕ್ಷೇತ್ರವಾಗಿದ್ದು ಅಲ್ಲಿನ ಪರಿಶಿಷ್ಟ ಜಾತಿಯವರ ಜಮೀನಿನಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ಎಂದು ಹೇಳಿ 6 ಕೋಟಿ 47 ಲಕ್ಷ ರೂಪಾಯಿಗಳನ್ನು ಒದಗಿಸಬೇಕೆಂದು ಒಂದು ಪತ್ರವನ್ನು ಕಳುಹಿಸಿಕೊಟ್ಟಿರುತ್ತಾರೆ. ಅದರ ನಂತರ ಸಮಾಜ ಕಲ್ಯಾಣ ಅಧಿಕಾರಿಗಳು, ಬಿಜಾಪುರ ಇವರು ಕೂಡ ನನಗೆ ಒಂದು ಪತ್ರವನ್ನು ಬರೆದಿರುತ್ತಾರೆ. 2002-03ನೇ ಸಾಲಿಗೆ ಸಣ್ಣ ನೀರಾವರಿ ಇಲಾಖೆಯಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ಗಂಗಾ ಕಲ್ಯಾಣ ಯೋಜನೆಯನ್ನು ಪ್ರಾರಂಭಿಸುವ ಕುರಿತು ಎಂದು ಬರೆದಿದ್ದಾರೆ. ಅದರ ಪ್ರಕಾರ ನಾವು ಫಲಾನುಭವಿಗಳ ಪಟ್ಟಿಯನ್ನು ಸಹಿತ ತಯಾರು ಮಾಡಿದ್ದೇವೆ, ಅದರಲ್ಲಿ 335 ಜನ ರೈತರದ್ದು ಇದೆ. ನಾನು ಶಾಸಕನಾಗಿ ಪತ್ರವನ್ನು ಬರೆದದ್ದು 20-6-2002 ರಂದು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಇವರಿಂದ ದಿನಾಂಕ : 8-7-2002 ರಂದು ಪಟ್ಟಿಯನ್ನು ಬಿಜಾಪುರಕ್ಕೆ ಸಲ್ಲಿಸಲಾಗಿದೆ.

ಅಧ್ಯಕ್ಷರು:- ತಾವು ಪ್ರಶ್ನೆ ಕೇಳಿ. ಇಲ್ಲಿ ಎಲ್ಲವನ್ನೂ ಓದಬಾರದು. ಸಪ್ಲಿಮೆಂಟರಿ ಪ್ರಶ್ನೆ ಕೇಳಿ.

ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ:- ಓದುವುದಲ್ಲ ಸಾರ್, ಮಾನ್ಯ ಸಚಿವರು ಇಲ್ಲವೆಂದು ಹೇಳಿರುವುದರಿಂದ ನಾನು ಮಂತ್ರಿಗಳಿಗೆ ದಿನಾಂಕಗಳ ಬಗ್ಗೆ ಮಾತ್ರ ಡೀಟೈಲ್ಸ್ ಹೇಳುತ್ತಿದ್ದೇನೆ. ಮತ್ತೆ ಇನ್ನೇನೂ ಇಲ್ಲ. ಬೆಂಗಳೂರು ಸಮಾಜ ಕಲ್ಯಾಣಾಧಿಕಾರಿಗಳಿಗೆ ದಿನಾಂಕ: 9-7-2002 ರಂದು ಬಿಜಾಪುರದಿಂದ ಪತ್ರವನ್ನು ಕಳುಹಿಸಿರುತ್ತಾರೆ.

ಅಧ್ಯಕ್ಷರು:- ಡೀಟೈಲ್ಸ್ ಓದಬೇಡಿ, ಪ್ರಶ್ನೆ ಕೇಳಿ. ಇಲ್ಲಿ ಬರೆದಿದ್ದೀರಿ, ಯಾರಿಗೆ ಅಂತ ಕೇಳಿ ಅಷ್ಟೆ.

ಶ್ರೀ ಎ.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು 2001-02ರಲ್ಲಿ ಅನುದಾನವನ್ನು ನಿಗದಿಪಡಿಸಿದ್ದೀರಾ ಎಂದು ಕೇಳಿದ್ದಾರೆ, ಇಲ್ಲವೆಂದು ನಾವು ಹೇಳಿರುತ್ತೇವೆ. 2002ನೇ ಸಾಲಿಗೆ ಪ್ರಸ್ತಾವನೆ ಬಂದಿದೆ ಎಂದು ನಾವು ಕೂಡ ಎರಡನೆಯ ಪ್ಯಾರಾದಲ್ಲಿ ಒಪ್ಪಿಕೊಂಡಿದ್ದೇವೆ. 2001-02ನೇ ಸಾಲಿಗೆ ಫಲಾನುಭವಿಗಳ ಪಟ್ಟಿಯನ್ನು ಸಿದ್ಧ ಮಾಡಿದ್ದೇವೆಂದು ಹೇಳಿದರೆ ಅದಕ್ಕೆ ನಾವು ಕಾರಣಕರ್ತರು ಅಲ್ಲ. ಮೂಲಭೂತವಾಗಿ ನಮ್ಮ ಬಜೆಟ್ ಅಲೋಕೇಷನ್ ಏನಿತ್ತು ಅದನ್ನು ನೋಡಿಕೊಂಡು ಅವರಿಗೆ ಮಂಜೂರಾತಿಯನ್ನು ಕೊಡುವುದರ ಬಗ್ಗೆ ಸರ್ಕಾರ 2002-2003ನೇ ಸಾಲಿಗೆ ಪರಿಶೀಲನೆ ಮಾಡುತ್ತದೆ.

ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ:- ನಮಗೆ ಕೊಡಬೇಕಾಗಿರುವಂಥಾದ್ದನ್ನು ಸಂಪೂರ್ಣವಾಗಿ ಕೊಡುವುದರ ಬಗ್ಗೆ ಒಂದು ಆಶ್ವಾಸನೆಯನ್ನು ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎ.ಕೃಷ್ಣಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಆಶ್ವಾಸನೆಯನ್ನು ಹಾಗೆ ಕೊಡುವುದಕ್ಕೆ ಬರುವುದಿಲ್ಲ, ಪ್ರತಿಯೊಂದು ಕೆಲಸಕ್ಕೂ ಬಜೆಟ್ ಎಂಬುದು ಇದೆ, ನಿಯಮಾವಳಿಗಳಿವೆ, ಆ ನಿಯಮಾವಳಿಗಳ ಪ್ರಕಾರ ಪ್ರತಿ ತಾಲ್ಲೂಕಿಗೆ, ಎಂಎಲ್ಎ ಕ್ಷೇತ್ರಕ್ಕೆ ಎಷ್ಟು ಕೊಡಬೇಕೆಂಬುದರ ಬಗ್ಗೆ ಗೈಡ್‌ಲೈನ್ಸ್ ಇದೆ. ಅದರ ಪ್ರಕಾರ ಸನ್ಮಾನ್ಯ ಸದಸ್ಯರಿಗೆ ಸಿಗಬೇಕಾದ ಪಾಲನ್ನು ಖಂಡಿತ ಸರ್ಕಾರ ಕೊಡಿಸುತ್ತದೆ.

ಶ್ರೀ ಸುಣ್ಣಗಾರ ಶರಣಪ್ಪ ತಿಪ್ಪಣ್ಣ:- ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಒಂದು ಕ್ಷೇತ್ರಕ್ಕೆ ಪೂರ್ತಿ ಬಂದಿದೆ, ನೀವು ಜಿಲ್ಲೆಯಲ್ಲಿ ತಾಲ್ಲೂಕುವಾರು ಯಾವ ಅರ್ಜಿಗಳು ಇವೆ, ಅದರಲ್ಲಿ ಅರ್ಜಿ ಇದ್ದವರಿಗೆ ಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ಎ.ಕೃಷ್ಣಪ್ಪ:- ಹಾಲಿ ಸರ್ಕಾರದ ಗೈಡ್‌ಲೈನ್ಸ್ ಏನಿದೆಯೋ ಅದರ ಪ್ರಕಾರ ಅವರಿಗೆ ಪುರಸ್ಕಾರವನ್ನು ಕೊಡುತ್ತೇವೆ.

ಚಿಕ್ಕಮಮಗಳೂರು ಜಿಲ್ಲೆ ಬೀರೂರು ಕ್ಷೇತ್ರದ ಎಮ್ಮೆದೊಡ್ಡಿಯಲ್ಲಿರುವ ಗೋಸದನವನ್ನು ಅಭಿವೃದ್ಧಿಪಡಿಸುವುದು.

185(1514) ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ಜಿಲ್ಲೆ ಬೀರೂರು ಕ್ಷೇತ್ರದ ಎಮ್ಮೆದೊಡ್ಡಿಯಲ್ಲಿ ಗೋಸದನವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಎಕರೆ ಜಮೀನು ಈ ಗೋಸದನಕ್ಕೆ ಇದೆ. ಎಷ್ಟು ಎಕರೆ ಗೋಸದನದ ಸ್ವಾಧೀನದಲ್ಲಿದೆ?

ಇ) ಈ ಗೋಸದನವನ್ನು ಅಭಿವೃದ್ಧಿಪಡಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಎಂ. ಮಹಾದೇವ್(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಹೌದು

ಆ) 10 ಎಕರೆ ಜಮೀನು ಗೋಸದನಕ್ಕೆ ಇದೆ. 10 ಎಕರೆ ಗೋಸದನದ ಸ್ವಾಧೀನದಲ್ಲಿದೆ.

ಇ) ಕಟ್ಟಡಗಳ ದುರಸ್ತಿ ಮತ್ತು ಗೋಸದನದ ಸುಧಾರಣೆಗಾಗಿ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಇದೊಂದು ಗೋಸದನವಿದೆ. ಇದು ಪೂರ್ಣವಾಗಿ ಹಾಳಾಗಿರುವ ಬಗ್ಗೆ ಮಾನ್ಯ ಸಚಿವರು ಈಗಾಗಲೇ ಗಮನಿಸಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಈ ಗೋಸದನಕ್ಕೆ ಸಂಬಂಧಪಟ್ಟಿರತಕ್ಕಂತಹ ಎಷ್ಟು ಎಕರೆ ಜಮೀನು ಇದೆ ಎನ್ನುವುದು, ಅದರಲ್ಲಿ 3652 ಎಕರೆ ಇದಕ್ಕೆ ಸಂಬಂಧಪಟ್ಟಿರುವುದು ಇದೆಯಲ್ಲಾ ಅದು ಈಗ ಯಾರ ಸ್ವಾಧೀನದಲ್ಲಿದೆ? 1089 ಎಕರೆ ಅರಣ್ಯ ಇಲಾಖೆ ಕೊಟ್ಟಿರತಕ್ಕಂತಹ ಈ ಗೋಸದನದ ಜಮೀನು ಯಾರ ಸ್ವಾಧೀನದಲ್ಲಿದೆ ಎಂಬುದರ ಬಗ್ಗೆ ಹೇಳಬೇಕು. ಅಕಸ್ಮಾತ್ ಈ ಜಾಗವು ಒತ್ತುವರಿಯಾಗಿದ್ದರೆ ಇದನ್ನು ಬಿಡಿಸುವುದಕ್ಕೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಗೋಸದನದ ಅಭಿವೃದ್ಧಿಗೆ ಎಷ್ಟು ಹಣವನ್ನು ಮಂಜೂರು ಮಾಡಿದ್ದೀರಿ? ಹಣ ಮಂಜೂರು ಮಾಡುವುದಕ್ಕೆ ಆಗದಿದ್ದರೆ ಇದನ್ನು ಖಾಸಗಿಯವರಿಗೆ ವಹಿಸಿಕೊಡತಕ್ಕಂತಹ ಸರ್ಕಾರದ ಯೋಚನೆ ಏನಾದರೂ ಇದೆಯೇ? ಇದು ಎರಡನೆಯ ಪ್ರಶ್ನೆ. ಇನ್ನು ಮೂರನೆಯ ಪ್ರಶ್ನೆ ಏನೆಂದರೆ, ಈ ಫಾರ್ಮ್‌ನಲ್ಲಿರತಕ್ಕಂತಹ, ಪಶು ಇಲಾಖೆಯಲ್ಲಿರತಕ್ಕಂತಹ ಫಾರ್ಮಗಳು ಮತ್ತು ಗೋಸದನವನ್ನು ಅಭಿವೃದ್ಧಿಪಡಿಸುವುದಕ್ಕೆ, ಅದರ ಮೇಲು ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೆ ಏನಾದರೂ ಒಂದು ಸಮಿತಿಯನ್ನು ರಚನೆ ಮಾಡುವ ಬಗ್ಗೆ ಸರ್ಕಾರ ಯೋಚನೆ ಮಾಡಿದೆಯೇ ಎಂದು ನಾನು ಕೇಳುತ್ತಿದ್ದೇನೆ; ದಯಮಾಡಿ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಎಂ.ಮಹದೇವ:- ಸನ್ಮಾನ್ಯ ಅಧ್ಯಕ್ಷರೆ, ಅಮೃತ್‌ಮಹಲ್ ಕಾವಲ್‌ಗೆ ಉಳಿದಿರುವ 3632 ಎಕರೆ ಕ್ಷೇತ್ರದ ಪೈಕಿ 1380 ಕ್ಷೇತ್ರಗಳಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಿ ಕಂದಾಯ ಇಲಾಖೆಯವರು ಸಾಗುವಳಿ ಚೀಟಿಯನ್ನು ಕೊಟ್ಟಿರುತ್ತಾರೆ. ಇಲಾಖೆಯ